ಶ್ರೀ ವಾಟಾಳ್ ನಾಗರಾಜ್ : ಅದು ತಪ್ಪು. ಸಂಪರ್ಕ ಇದೆ ನಿಜ. ಆದರೆ ಅವರ ವ್ಯವಸ್ಥೆಗಳು ನನ್ನಲ್ಲಿ ಇಲ್ಲ.

ಶ್ರೀ ಜೆ.ಹೆಚ್. ಪಟೇಲ್ : ಒಬ್ಬ ಸ್ವಾಮಿಗಳು ಊರಿನಲ್ಲಿದ್ದರು, ಊರಿನಲ್ಲಿ ಬಹಳ ಜನ ಸೇರಿದ್ದರು. ಅವರು ಪ್ರವಚನ ಮಾಡುವುದಕ್ಕಿಂತ ಮುಂಚೆ ನಾಣಯ್ಯನವರಂಥವರು ಹೋಗಿದ್ದರು. ಸ್ವಾಮಿಗಳು ಅವರನ್ನು ಕರೆದು ವಿನಪ್ಪಾ ಬಹಳ ಜನ ನಿನ್ನ ಬಗ್ಗೆ ಮಾತನಾಡುತ್ತಿದ್ದಾರೆ. ನಿನಗೆ ಕೆಟ್ಟ ಹೆಸರು ಬಂದಿದೆ. ನೀನು ಬಹಳ ಕುಡಿಯುತ್ತೀಯ ಎನ್ನುತ್ತಿದ್ದಾರೆ ಎಂದರು. ಅದಕ್ಕೆ ಅವರು ಹೋದ ಸಾರಿ ನಿಮ್ಮ ಜೊತೆಯಲ್ಲಿ ಕುಡಿದಾದ ಮೇಲೆ ನಾನು ಕುಡಿದೇ ಇಲ್ಲ ಎಂದರು. ಈ ಒಂದು ವಿಷಯವನ್ನು ಇನ್ನೊಂದು ಸಾರಿ ತೆಗೆದುಕೊಳ್ಳೋಣ.

(ನಗು)

ಅಧ್ಯಕ್ಷರು : ನಾಣಯ್ಯರವರ ಸಹವಾಸ ಅಂದ ತಕ್ಷಣ, ಇದರಿಂದ ಅವರ ಸಹವಾಸದಲ್ಲಿ ಬಿದ್ದಿದ್ದೇನೆ ಎಂಬ ರೀತಿಯಲ್ಲಿ ಎಂದು ಮಾನ್ಯ ಪಟೇಲರು ಹೇಳಿದರಲ್ಲಾ, ಇದು ನಿಜವಾಗಿ ಹಕ್ಕುಚ್ಯುತಿಯಾಗಿರುತ್ತದೆ. ಇದರ ಬಗ್ಗೆ ಹಕ್ಕುಚ್ಯುತಿಯನ್ನು ಪಟೇಲರ ಮೇಲೆ ಮಂಡಿಸಬೇಕಾಗುತ್ತದೆ. ಸ್ವಾಮಿಗಳ ಕಥೆ ಹೇಳಿ ದಾರಿ ತಪ್ಪಿಸಿ ನಾನು ಆ ಸಹವಾಸದಲ್ಲಿದ್ದೇನೆ. ಎಂಬ ಭಾವನೆ ಬರುವ ರೀತಿಯಲ್ಲಿ ಹೇಳಿದ್ದಾರೆ. ಅದು ನನ್ನ ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಸ್ನೇಹ ಬಹಳ ವರ್ಷಗಳಿಂದ ಇದೆ ಎಂದು ಹೇಳಿದೆ ಅಷ್ಟೇ. ನನಗೂ ಬೈರೇಗೌಡರಿಗೂ ಸ್ನೇಹ ಇದೆ. ನನಗೂ ನಂಜೇಗೌಡರಿಗೂ ಹಲವಾರು ವರ್ಷಗಳಿಂದ ಸ್ನೇಹ ಇದೆ. ...

ಶ್ರೀ ಹೆಚ್.ಎನ್. ನಂಜೇಗೌಡ : ಯಾವಾಗಲೂ ಒಂದು ದಿನ ಇರುತ್ತಾ ಇರಲಿಲ್ಲ ಅಷ್ಟೇ.

ಅಧ್ಯಕ್ಷರು : ನೋಡಿ, ನಿಮ್ಮ ಸಾಕ್ಷಿಗೆ ಯಾರೂ ಕೂಡ ಅಂತಹ ಒಳ್ಳೆಯವರಿಲ್ಲ. ಇಂತಹ ಸಾಕ್ಷಿಗಳನ್ನು ಅವಲಂಬಿಸಿ ಹೆಚ್ಚಿನ ಕಷ್ಟಕ್ಕೆ ಸಿಕ್ಕಿ ಹಾಕಿಕೊಂಡಿರುವ ಪ್ರಮೇಯ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈಗ ಕಾಲ ಕೆಟ್ಟು ಹೋಗಿದೆ. ಯಾರು ಯಾರು ಕೈ ಕೊಡುತ್ತಾರೆ ಎಂಬುದು ಗೊತ್ತಿಲ್ಲ. ಅಧ್ಯಕ್ಷರೇ, ನೀವು ನಿಮ್ಮ ರಕ್ಷಣೆಗೆ ಬರಬೇಕು.

ಅಧ್ಯಕ್ಷರು : ನನಗೆ ನಂಬಿಕೆ ಇದೆ. ನೀವು ಅಂಥವರು ಅಲ್ಲ ಎಂದು. ಅದು ಬಿಡಿ. ಈಗ ಪ್ರಕಟಣೆ

ಪ್ರಕಟಣೆ

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆಂದು ಮಾನ್ಯ ಸಭಾಧ್ಯಕ್ಷರು ಪ್ರಕಟಿಸಿದರು.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 114ರ ಮೇರೆಗೆ ವಿಧಾನ ಪರಿಷತ್ತಿನಲ್ಲಿ ದಿನಾಂಕ 31ನೇ ಮಾರ್ಚ್ 1995ರಂದು ಈ ಕೆಳಕಂಡ ವಿಧೇಯಕಗಳು ಯಾವುದೇ ತಿದ್ದುಪಡಿಯಿಲ್ಲದೆ ಅನುಮೋದಿಸಿತೆಂದು ಈ ಮೂಲಕ ತಿಳಿಸುತ್ತೇನೆ.

1. ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ, 1995.
2. ಕರ್ನಾಟಕ ತೆರಿಗೆ ಕಾನೂನು (ತಿದ್ದುಪಡಿ) ವಿಧೇಯಕ, 1995.

3. ಕರ್ನಾಟಕ ಸ್ಟಾಂಪ್ (ತಿದ್ದುಪಡಿ) ವಿಧೇಯಕ, 1995.
4. ಕರ್ನಾಟಕ ಮೋಟಾರು ವಾಹನ ತೆರಿಗೆ (ತಿದ್ದುಪಡಿ) ವಿಧೇಯಕ, 1995
5. ಕರ್ನಾಟಕ ಧನ ವಿನಿಯೋಗ ವಿಧೇಯಕ, 1995.

ಯುಗಾದಿಯ ಶುಭಾಶಯಗಳು

ಅಧ್ಯಕ್ಷರು - : ಕರ್ನಾಟಕದ ಜನತೆಗೆ ಈ ಸಭೆಯು ಉಗಾದಿಯ ಪ್ರಯುಕ್ತ ಹೊಸ ವರ್ಷದ ಶುಭಾಶಯಗಳನ್ನು ತಿಳಿಸುತ್ತಾ ಅವರ ಬಾಳು ಹೊಸ ವರ್ಷದಲ್ಲಿ ಹರ್ಷದಿಂದ ಕೂಡಿರಲೆಂದು ಹಾರೈಸುತ್ತೇನೆ. ಮತ್ತು ವಿಧಾನ ಮಂಡಲದ ಕಾರ್ಯಾಲಯವು ಈ ವರ್ಷದಿಂದ ರಮಜಾನ್ ತಿಂಗಳಲ್ಲಿ ಒಂದು ದಿವಸ ಇಫ್ತಾರ್ ಕಾರ್ಯಕ್ರಮ ಇಟ್ಟುಕೊಳ್ಳತಕ್ಕದ್ದು ಹಾಗೂ ಹೀಗಾಗಿ ಸಂದರ್ಭದಲ್ಲಿ ಎಲ್ಲಾ ಧರ್ಮದ ಜನರನ್ನು ಸೇರಿಸಿ ನಿಮ್ಮನ್ನು ಒಳಗೊಂಡು ಒಂದು ಚಹಾ ಕೂಟ ಏರ್ಪಾಡು ಮಾಡತಕ್ಕದ್ದು ಹಾಗೂ ಕ್ರಿಸ್ ಮಸ್ ಹಬ್ಬದ ಸಂದರ್ಭದಲ್ಲಿ ಒಂದು ಸ್ನೇಹ ಕೂಟ ಏರ್ಪಾಡು ಮಾಡತಕ್ಕದ್ದು ಎಂಬ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ನಾಳೆ ಹಬ್ಬ ಇರುವುದರಿಂದ ಇವೊತ್ತು ಸಂಜೆ ನಾಲ್ಕು ಗಂಟೆಗೆ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್ ನಲ್ಲಿ ಒಂದು ಸ್ನೇಹ ಕೂಟ (ಚಹಾ) ಏರ್ಪಾಡು ಮಾಡಿದ್ದೇವೆ. ದಯಮಾಡಿ ಎಲ್ಲರೂ ಭಾಗವಹಿಸಬೇಕು, ಈಗ ಸದನ ಮುಂದೂಡಿ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸಭೆ ಮತ್ತೆ ಸೇರುವುದು.

(ಸಭೆಯು 2.30 ನಿಮಿಷಕ್ಕೆ ಮುಕ್ತಾಯಗೊಂಡಿತು)

(ಸದನವು ಮಧ್ಯಾಹ್ನ 2.30ಕ್ಕೆ ಮುಕ್ತಾಯಗೊಂಡು ಮತ್ತೆ 3.4.95ನೇ ಸೋಮವಾರ ಬೆಳಿಗ್ಗೆ 11.00 ಘಂಟೆಗೆ ಸೇರಲು ತೀರ್ಮಾನಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)